ಕೊಂಡಳ್ಳಿ ಲಚುಮ ಸಾಕಿದ್ದ ಮೊಟ್ಟೆಕೋಳಿಯನ್ನು ಗಡವ ಬೆಕ್ಕು ಸರಿರಾತ್ರಿಯಲ್ಲಿ ಹಿಡಿದು ತಿಂದುಹಾಕಿತ್ತು. ಅದು ಹೀಗೆ ಮಾಡಬಹುದು ಅನ್ನುವ ಅನುಮಾನದಿಂದಲೇ ಲಚುಮ ಸೂರ್ಯ ಸರಿದು ಕತ್ತಲು ಕವುಚುತ್ತಿದ್ದಂತೆ ಕೋಳಿಯ ಮೇಲೆ ಬಿದುರಪುಟ್ಟಿ ಮೊಗಚಿಹಾಕಿ ಅದರ ಮೇಲೆ ಭಾರಕ್ಕೆ ಸಮಾ ಕಲ್ಲು ಇಟ್ಟಿದ್ದ. ಗಡವ ಬೆಕ್ಕು ಸರಿ ಹೊತ್ತಿನಲ್ಲಿ ಪುಟ್ಟಿಯ ಮೇಲಿಟ್ಟಿದ್ದ ಕಲ್ಲನ್ನು ಅದು ಹೇಗೋ ಸರಿಸಿ ಕೋಳಿಯ ಕುತ್ತಿಗೆಗೆ ಬಾಯಿ ಹಾಕಿ ಅದು ಕೊಕ್ ಅನ್ನುವ ಮೊದಲೇ ರಕ್ತಹೀರಿ ಕಾಫೀ ತೋಟದ ಕೆಲಸಗಾರರ ಸಾಲುಮನೆಗಳ ಹಿಂಭಾಗಕ್ಕೆ ಎಳದೊಯ್ದು ಕಾಫೀಗಿಡದ ಬುಡದಲ್ಲಿ ಪುಕ್ಕ ತರಿದು ಚಿಕ್ಕ ಮೂಳೆಯನ್ನೂ ಬಿಡದೆ ತಿಂದು ತೇಗಿತ್ತು. ಕಾಫೀಗಿಡದ ಬುಡದಲ್ಲಿ ಸತ್ತ ಕೋಳಿಯ ರೆಕ್ಕೆಪುಕ್ಕಗಳನ್ನು ನೋಡಿ ಲಚುಮನ ಸಿಟ್ಟು ನೆತ್ತಿಗೇರಿತ್ತು. ಹಾಲುವಾಣದಗಿಡ ಸವರುವ ಕತ್ತಿಯನ್ನು ಪಕ್ಕದಲ್ಲಿಟ್ಟುಕೊಂಡು ಎರಡು ದಿನ ರಾತ್ರಿ ಹಗಲು ಗಡವ ಬೆಕ್ಕಿಗಾಗಿ ಕಾದು ಕುಳಿತಿದ್ದ. ಅದು ಅವನ ಕಣ್ಣು ತಪ್ಪಿಸಿ ಅಲ್ಲಿ ಇಲ್ಲಿ ಓಡಾಡಿತ್ತು. ಅದನ್ನು ಹಿಡಿದು ಕತ್ತಿಯಿಂದ ಸಿಗಿದು ಹಾಕುವ ಬೇರೆ ದಾರಿ ಕಾಣದೆ ಮೂರನೇ ದಿನ ಕಾಫೀ ತೋಟದ ಕೆಲಸಕ್ಕೆ ಹಾಜರಾಗಿದ್ದ. ಅವನ ಮನಸ್ಸಿನಲ್ಲಿ ಸಿಟ್ಟು ಲಾವಾರಸದಂತೆ ಕುದಿಯುತ್ತಿತ್ತು. ಬಣಕಲ್ ಸಂತೆಯಲ್ಲಿ ಕೋಳಿಯನ್ನು ಯಾರಾದರೂ ಬೇರಿಗೆ ಮಾರಿದ್ದರೆ ಇನ್ನೂರು ಮುನ್ನೂರು ರೂಪಾಯಿ ಕಣ್ಣುಮುಚ್ಚಿ ಕೊಡುತ್ತಿದ್ದ. ಅರ್ಧ ಕೆಜಿ ಭೂತಾಯಿ ಒಂದು ಕ್ವಾರ್ಟರ್ ರಾಜಾ ಮಾರ್ಕ್‌ನ ಬ್ರಾಂದಿ ಕೊಳ್ಳಬಹುದಿತ್ತಲ್ಲಾ ಎಂದು ಒಳಗೊಳಗೇ ಕೊರಗಿದ್ದ. ಹುರಿದ ಮೀನಿನ ತುಂಡುಗಳನ್ನು ನಂಚಿಕೊಳ್ಳುತ್ತಾ ಬ್ರಾಂದೀ ದ್ರವವನ್ನು ಗುಟುಕರಿಸುತ್ತಾ ಮಜಾ ತೆಗೆದುಕೊಳ್ಳಬಹುದಿತ್ತಲ್ಲಾ ಎಂದು ಪೇಚಾಡಿದ್ದ. ಗಡವ ಬೆಕ್ಕು ಎಲ್ಲವನ್ನೂ ಹಾಳು ಮಾಡಿತ್ತು.

ಲಚುಮ ಕೋಳಿ ಕಳೆದುಕೊಂಡು ಮನಸ್ಸಿನಲ್ಲಿ ಹೀಗೆ ಸಂಕಟ ಪಡುತ್ತಿದ್ದರೂ ಅವನ ಹೆಂಡತಿ ದೇವೇರಿ ತನ್ನ ಗಂಡನ ಬಗ್ಗೆಯಾಗಲೀ ಕೋಳಿಯನ್ನು ಹಿಡಿದು ತಿಂದು ತೇಗಿದ ಗಡವಬೆಕ್ಕಿನಬಗ್ಗೆಯಾಗಲೀ ತಲೆಕೆಡಿಸಿಕೊಳ್ಳದೆ ಬೆಳಿಗ್ಗೆ ಬೆಳಿಗ್ಗೆಯೇ ಬಣ್ಣ ಬಣ್ಣದ ಹೂವಿನ ಪ್ರಿಂಟೆಡ್ ಸೀರೆಯುಟ್ಟು ಮುಖಕ್ಕೆ ಪೌಡರ್ ಸವರಿಕೊಂಡು ಕುಂಡೆ ಕುಣಿಸುತ್ತಾ ತೋಟದ ಬಂಗಲೆಮನೆಯ ಕೆಲಸಕ್ಕೆ ನಡೆದು ಹೋಗಿದ್ದಳು. ಅವಳ ಅಂತಹ ಸೊಕ್ಕಿನ ನಡೆಯಿಂದ ಲಚುಮ ಮತ್ತಷ್ಟು ಕೆರಳಿ ಕೆಂಡವಾಗಿದ್ದ.

ಬಯಲುನಾಡಿನಿಂದ ಕೆಲಸ ಅರಸಿಕೊಂಡು ಕಾಫೀ ಸೀಮೆಗೆ ಬಂದ ಹೊಸತರಲ್ಲಿ ಗುಬ್ಬಚ್ಚಿಯಂತಿದ್ದ ದೇವೇರಿ ತೋಟದ ಮಾಲೀಕರ ಬಂಗಲೆ ಮನೆಯ ಕೆಲಸಕ್ಕೆ ಸೇರಿದಾಗಿನಿಂದ ಗಿಡುಗನಂತಾಗಿ ಬಿಟ್ಟಿದ್ದಳು. ಲಚುಮ ಒಂದು ಮಾತಾಡಿದರೆ ಹತ್ತು ಮಾತಾಡಿ ಎದುರುತ್ತರ ಕೊಟ್ಟು ಅವನ ಬಾಯಿ ಮುಚ್ಚಿಸಿ ಬಿಡುತ್ತಿದ್ದಳು. ಹುಣ್ಣಿಮೆ ಬೆಳದಿಂಗಳಿನಂತಹ ಮೈಬಣ್ಣ.. ಬಳ್ಳಿಯಂತೆ ತೊನೆದಾಡುವ ಶರೀರದ ಉಬ್ಬು ತಗ್ಗುಗಳ ಮಾದಕ ಚೆಲುವಿನ ಹಂಬಲದ ಬಲೆಯಲ್ಲಿ ಸಿಲುಕಿದ್ದ ಲಚುಮ ಬಾಯಿ ಮುಚ್ಚಿಕೊಂಡು ತೆಪ್ಪಗಾಗಿ ಬಿಡುತ್ತಿದ್ದ. ಅವಳಿಗೆ ತದ್ವಿರುದ್ಧವಾದ ರೂಪ ಲಚುಮನದು. ಆರಡಿ ದೈತ್ಯಕಾಯಕ್ಕೆ ಮೆತ್ತಿಕೊಂಡ ಧಾರವಾಡದ ಎರೆಮಣ್ಣಿನಂತಹ ಕಡುಗಪ್ಪು ತೊಗಲು.. ಒಳಸರಿದ ಕೆನ್ನೆಯಮೇಲೆ ಬೆಳೆದ ಕುರುಚಲುಗಡ್ಡ.. ಅವನ ಕಪ್ಪು ಚಿರತೆಯ ಕಣ್ಣುಗಳಲ್ಲಿ ತಣ್ಣಗಿನ ಕ್ರೌರ್ಯ ಸದಾಕಾಲ ಮಿಡುಕುತ್ತಿತ್ತು. ಅವನದು ಮೃಗ ಸಹಜ ವಾಂಛೆ. ಕಾಫೀತೋಟದಲ್ಲಿ ದಿನವಿಡೀ ಮೈಮುರಿದು ದುಡಿಯುವ ಉತ್ಕಟ ಆವೇಗ. ಕಾಫೀಗಿಡದ ಬುಡದಲ್ಲಿ ಅಗೆತ ಮಾಡುವುದು.. ಗೊಬ್ಬರ ಸೊಪ್ಪು ದರಗಲು ಹಾಕಿ ಮಣ್ಣು ಮುಚ್ಚುವ ಕೆಲಸ.. ಬೋರ್ಡ್ ದ್ರಾವಣ ಸಿಂಪಡಿಸುವುದು.. ಕಾಫೀ ಗಿಡಗಳ ನೆರಳಿಗೆಂದು ಬೆಳಸಿದ ಹಾಲವಾಣದ ಗಿಡಗಳ ಕಾಂಡಕ್ಕೆ ಸುಣ್ಣ ಬಳಿಯುವುದು.. ಕುಕ್ಕಗೆತ ಮಾಡುವುದು.. ಮರಗಸಿ ಮಾಡುವುದು.. ಔಷಧಿ ಸಿಂಪಡಿಸುವುದು..ಸ್ಪಿಂಕ್ಲರ್ ವೈರ್ ಹರಡುವುದು.. ಹೀಗೆ ಒಂದಲ್ಲ ಒಂದು ಕೆಲಸ ಲಚುಮನ ಮೈಗಂಟಿಕೊಂಡಿರುತ್ತಿದ್ದವು.

ಸೂರ್ಯ ಪಶ್ಚಿಮದಲ್ಲಿ ಮುಳುಗಿ ಹೊತ್ತು ಕಂತ ಮೇಲೆ ಕಾಡು ಜೀವ ತಳೆಯುತ್ತಿತ್ತು. ಅದೇ ವೇಳೆಯಲ್ಲಿ ಲಚುಮ ಗಿಡಸವರುವ ಕತ್ತಿಯನ್ನು ಸೊಂಟಕ್ಕೆ ಸುತ್ತಿದ ಪ್ಲಾಸ್ಟಿಕ್ಹಗ್ಗದಲ್ಲಿ ನೇತಾಡಿಸಿಕೊಂಡು ಕಾಡಿನೊಳಗೆ ನುಸುಳುತ್ತಿದ್ದ. ಒಂದಲ್ಲ ಒಂದು ಮಿಕ ಅವನ ಬೇಟೆಗೆ ಈಡಾಗುತ್ತಿತ್ತು. ಚಿಕ್ಕ ಗಾತ್ರದ ಕಾಡುಹಂದಿ.. ಕಾಡುಕುರಿ.. ಏನಿಲ್ಲವೆಂದರೂ ಒಂದು ಮೊಲವನ್ನಾದರೂ ಬೇಟೆಯಾಡಿ ತೋಟದ ಸಾಲುಮನೆ ಸೇರುತ್ತಿದ್ದ.

ಮಿಕದ ಚರ್ಮ ಸುಲಿದು ಕಳ್ಳುಪಚ್ಚಿ ಹೊರತೆಗೆದು ಸ್ನಾಯುಖಂಡಗಳನ್ನು ತುಂಡುಗಳನ್ನಾಗಿ ಮಾಡುವ ವೇಳೆಗೆ ದೇವೇರಿ ಖಾರದ ಮಸಾಲೆ ರುಬ್ಬಿ ಹವಣು ಮಾಡಿಕೊಳ್ಳುತ್ತಿದ್ದಳು. ನಂತರ ಬಾಡು ಬೇಯಿಸಿ ಅಡುಗೆ ತಯಾರಿಸಿ ಗಂಡನಿಗೆ ತಟ್ಟೆಯ ತುಂಬ ಬಾಡಿನ ತುಂಡುಗಳನ್ನು ಬಡಿಸುತ್ತಿದ್ದಳು. ಲಚುಮ ಅಲ್ಯೂಮಿನಿಯಮ್ ಲೋಟದಲ್ಲಿನ ಕಳ್ಳಭಟ್ಟಿ ಸರಾಯಿಯನ್ನು ಗುಟುಕರಿಸುತ್ತಾ ಬೆಂದ ಬಾಡಿನ ತುಂಡುಗಳನ್ನು ನಂಚಿಕೊಳ್ಳುತ್ತಾ ಊಟ ಮುಗಿಸುತ್ತಿದ್ದ. ಹರವಿದ ಚಾಪೆಯ ಮೇಲೆ ನಿಡಿದಾಗಿ ಕಾಲುಚಾಚಿ ಮಲಗಿದ್ದ ದೇವೇರಿಯ ಅರೆನಗ್ನ ಶರೀರ ಕದಲಲಾರಂಭಿಸಿದಾಗ ಲಚುಮನ ಕರಿನಾಗರದಂತಹ ತೋಳು ಅವಳನ್ನು ಬಳಸಿ ಅವಳ ದೇಹದ ಬಾಗು ಬಳಕು ತಿರುವುಗಳಲ್ಲಿ ಹರಿದಾಡಿ ಸರಿದಾಡುವ ವೇಳೆಗೆ ಅವನ ಗಂಡಸುತನ ಉದ್ಧೃತವಾಗುತ್ತಿತ್ತು. ಅವಳ ಬಿಳೀತೊಗಲ ದೇಹದ ನುಣುಪಿನ ಮೇಲೆ ಜೀಕಿ ಬೆವರುಹರಿಸಿ ದಣಿಯುತ್ತಿದ್ದ. ಮೂಡಣದಲ್ಲಿ ಸೂರ್ಯ ಮಾರುದ್ದ ಬರುವವರೆವಿಗೂ ಸತ್ತ ಹೆಣದಂತೆ ಮಲಗಿ ನಿದ್ರಿಸುತ್ತಿದ್ದ.

ದಟ್ಟಾನುದಟ್ಟ ದರಿದ್ರ ಕುಗ್ರಾಮ ಕೊಂಡಳ್ಳಿಯ ಒಂದು ಬಡ ಕುಟುಂಬದಲ್ಲಿ ಜನಿಸಿದ್ದ ಲಚುಮ ಬಾಲ್ಯದಲ್ಲಿಯೇ ಜಗತ್ತಿನ ಎಲ್ಲಾ ಕಷ್ಟಕೋಟಲೆಗಳ ನರಕಸದೃಶ ಕ್ಲೇಶಗಳನ್ನು ಅನುಭವಿಸಿದ್ದ. ಅವನನ್ನು ಹೆತ್ತವರು ಮತ್ತು ಒಡಹುಟ್ಟಿದವರ ತುತ್ತಿನಚೀಲ ತುಂಬಿಕೊಳ್ಳಲು ಸಾಧ್ಯವಾಗದೆ ಕರುಳ ಕೆಟ್ಟ ಹಸಿವಿನ ದೈನೇಸಿ ಬದುಕಿನ ಮಧ್ಯೆ ಅವನ ಬಾಲ್ಯ ಕಳೆದುಹೋಗಿತ್ತು. ಒಣ ಉರುವಲು ಕಟ್ಟಿಗೆ ತರಲು ಕಾಡಿಗೆ ಹೋದಾಗ ಮೇಲೆ ಆಕಾಶದಲ್ಲಿ ಸೂರ್ಯ ಬೆಂಕಿಯ ಚೆಂಡು ಕೆಳಗೆ ನೆಲ ಕಾದ ಕಾವಲಿ.. ಕಟ್ಟಿಗೆ ಕಡಿಯುವಾಗ ಲಚುಮನ ಮೈಯಲ್ಲಿನ ರಗುತವೆಲ್ಲಾ ಬಸಿದು ಬೆವರಾಗಿ ಇಳಿಯುತ್ತಿತ್ತು. ನೇಸರು ನೆತ್ತಿಯ ಮೇಲೆ ಬಂದಾಗ ಲಚುಮನ ತುತ್ತಿನಚೀಲ ಚುರುಗುಟ್ಟುತ್ತಿತ್ತು. ನಾಯಿಬೋರೆ ಮರಕ್ಕೆ ಕಲ್ಲೆಸೆದು ಬೋರೆಹಣ್ಣನ್ನು ಉದುರಿಸಿ ತಿನ್ನುತ್ತಿದ್ದ. ಮುಳ್ಳಿನ ಗಿಡಗಂಟೆಗಳಲ್ಲಿ ಕೈಹಾಕಿ ಕಾರೆಹಣ್ಣು.. ಚಳ್ಳೇಹಣ್ಣುಗಳನ್ನು ಬಿಡಿಸಿ ಬಾಯಿಗೆ ಹಾಕಿಕೊಂಡು ಹಸಿವು ಹಿಂಗಿಸಿಕೊಳ್ಳುತ್ತಿದ್ದ. ಕಾಡಿನ ಪೊದೆಗಳಲ್ಲಿ.. ಮರದ ಪೊಟರೆಗಳಲ್ಲಿ.. ಬಂಡೆಗಳ ಸಂದಿಗಳಲ್ಲಿ ಕೋಲುಜೇನು.. ತುಡವೇ ಜೇನು ರಾಳಜೇನು ಹುಳಗಳು ಕಟ್ಟಿರುವ ಹುಟ್ಟುಗಳನ್ನು ಮುರಿದು ಜೇನುತುಪ್ಪ ನೆಕ್ಕುತ್ತಿದ್ದ. ಬಂಡೆಯ ಕೊರಕಲಿನಲ್ಲಿ ಮಲೆತುನಿಂತ ನೀರನ್ನು ಬೊಗಸೆಯಲ್ಲಿ ಎತ್ತಿ ಕುಡಿದು ಬಾಯಾರಿಕೆ ನೀಗಿಸಿಕೊಳ್ಳುತ್ತಿದ್ದ. ಹೊತ್ತು ಕಂತುತ್ತಿದ್ದಂತೆ ಕಟ್ಟಿಗೆ ಹೊರೆಯನ್ನು ತಲೆಯ ಮೇಲಿಟ್ಟುಕೊಂಡು ಜೋಪಡಿ ಸೇರಿದರೆ ಅವನ ಅವ್ವ ರಾಗಿ ರೊಟ್ಟಿ ಅದರ ಮೇಲೆ ಖಾರದ ಎರಡು ಹಸೀಮೆಣಸಿನಕಾಯಿ ಉಳ್ಳಾಗಡ್ಡೆ ಇಟ್ಟು ಉಣ್ಣಲು ಕೊಡುತ್ತಿದ್ದಳು.

ಕುರುಚಲು ಕಾಡಿನಲ್ಲಿ ಮೊಲಗಳು ಬಿಲ ಬಿಟ್ಟು ಹೊರಬಂದು ಎಳೆಬಿಸಿಲಲ್ಲಿ ಚಿನ್ನಾಟವಾಡುವಾಗ ಲಚುಮ ಕವಣೆಕಲ್ಲು ಬೀಸಿಯೋ.. ಅವುಗಳಹಿಂದೆ ಓಡಿ ಕಟ್ಟಿಗೆಯಿಂದ ಬಡಿದು ಬೇಟೆಯಾಡುತ್ತಿದ್ದ. ಬೈಗಿನಲ್ಲಿ ಕಾಡಿನ ಕಳ್ಳದಾರಿಯಲ್ಲಿ ಫಾರೆಸ್ಟ್ ಗಾರ್ಡ್‌ಗಳ ಕಣ್ಣು ತಪ್ಪಿಸಿ ಗುಡಿಸಲು ಸೇರಿದರೆ ಅವನ ಅವ್ವ ರಣ ಖಾರ ಅರೆದು ಮೊಲದ ಮಾಂಸ ಬೇಯಿಸಿ ಲಚುಮನಿಗೆ ಉಣಬಡಿಸುತ್ತಿದ್ದಳು.

ಲಚುಮನ ಅವ್ವ ದುಗ್ಗಮ್ಮ ಶಿವನಪಾದ ಸೇರುವ ಮುನ್ನ ಪಕ್ಕದ ಹಳ್ಳಿಯಿಂದ ಮಲತಾಯಿ ಕೈಯಿಲ್ಲಿ ಕಡುಕಷ್ಟ ಅನುಭವಿಸಿ ಬೆಳೆದ ಚೆಂದುಳ್ಳಿ ಚೆಲುವೆ ದೇವೇರಿಯನ್ನು ಮಗನಿಗೆ ಗಂಟು ಹಾಕಿ ಅವನ ಮುಂದಿನ ಬದುಕು ಹಸನಾಗುವಂತೆ ಮಾಡಿದ್ದಳು. ಈಗ ಲಚುಮ ಕಾಡಿಗೆ ಹೋಗಿ ಕಟ್ಟಿಗೆ ಕಡಿದು ತರುತ್ತಿರಲಿಲ್ಲ. ಗಂಡ ಹೆಂಡತಿ ಇಬ್ಬರೂ ಅವರಿವರ ಹೊಲಗಳಲ್ಲಿ ದುಡಿದು ಹೊಟ್ಟೆತುಂಬ ಉಂಡು ಕಣ್ತುಂಬ ನಿದ್ದೆ ಮಾಡುತ್ತಿದ್ದರು. ಒಮ್ಮೆಲೆ ಭಯಂಕರ ಬರ ಸುತ್ತಮುತ್ತಲ ಜಿಲ್ಲೆ.. ತಾಲ್ಲೂಕು ಹಳ್ಳಿಗಳ ಮೇಲೆ ಮುರಕೊಂಡು ಬಿದ್ದಿತ್ತು. ಮೇಲೆ ಆಕಾಶದಲ್ಲಿ ಸೂರ್ಯ ಅಂಬೋ ಕೆಂಡದುಂಡೆ ಬಿಸಿಲ ವೃಷ್ಟಿ ಸುರಿಸಿ ಬಿತ್ತಿದ ಬೀಜ ಭೂಮಿಯಲ್ಲೇ ಸೀದು.. ಕೆರೆ ಕುಂಟೆ ಬಾವಿಗಳಲ್ಲಿನ ಜಲವೆಲ್ಲ ಬತ್ತಿ ಬರಿದಾಗಿ.. ಜನ ದನಗಳು ಕುಡಿಯುವ ನೀರಿಗೂ ತತ್ವಾರವಾದಾಗ ಲಚುಮ ಮತ್ತು ದೇವೇರಿ ಕೆಲಸ ಅರಸಿಕೊಂಡು ಕಾಫಿ ಸೀಮೆಗೆ ಗುಳೆ ಬಂದಿದ್ದರು.

ಹುಲಿಕಲ್ ಕಾಫೀ ತೋಟದ ಮಾಲೀಕ ನರೇಂದ್ರಗೌಡನಿಗೆ ಹತ್ತು ಹಲವು ಹವ್ಯಾಸಗಳು ಮೈಗಂಟಿಕೊಂಡಿದ್ದವು. ಕಾಡಿನಲ್ಲಿ ಜಿಂಕೆ ಕಡವೆ ಕಾಡುಕುರಿ ಮುಂತಾದ ಕಾಡುಮೃಗಗಳನ್ನು ಶಿಕಾರಿ ಮಾಡುವ ಹುಚ್ಚನ್ನು ತಲೆಗೆ ಹಚ್ಚಿಕೊಂಡಿದ್ದ. ವಾರಕ್ಕೊಮ್ಮೆಯಾದರೂ ಜಿಂಕೆ ಸಾಂಬಾರಜಿಂಕೆ ಕಡವೆ ಕಾಡುಹಂದಿ ಮುಂತಾದ ಯಾವುದಾದರೂ ಒಂದು ಮಿಕವನ್ನು ಬೇಟೆಯಾಡದಿದ್ದರೆ ತಲೆಯೊಳಗೆ ಭೂತ ಹೊಕ್ಕಂತೆ ತಿಕ್ಕಲು ತಿಕ್ಕಲಿನಂತೆ